ಸಜ್ಜನರ ಸಹವಾಸವಿಲ್ಲದಿದ್ದರೆ ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಪರಿಪೂರ್ಣನಾಗಲಾರನೆಂಬ ಅಂಶವನ್ನು ತಮ್ಮ ಅನೇಕ ವಚನಗಳ ಮೂಲಕ ಬಸವಣ್ಣನವರು ಹೇಳಿದ್ದಾರೆ. ಲೋಕದಲ್ಲಿ ಒಳ್ಳೆಯ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಜ್ಜನರ ಸಂಗದಲ್ಲಿರಬೇಕೆಂದು ತಿಳಿಸುತ್ತಾ, "ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯ, ಶ್ರೀಗುರು ಪಾದವ ಹಿಡಿದು ಪಾವನನಾದೆನಯ್ಯಾ" ಎಂದು ಅವರು ಸಂಭ್ರಮಿಸಿದ್ದಾರೆ.

**ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ**
**ಮಹಾನುಭಾವರ ಕಾಣಬಹುದಯ್ಯ,**
**ಮಹಾನುಭಾವರ ಸಂಗದಿಂದ**
**ಶ್ರೀಗುರುವನರಿಯಬಹುದು, ಜಂಗಮವನರಿಯಬಹುದು,**
**ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು,**
**ಇದು ಕಾರಣ ಸದ್ಭಕ್ತರ ಸಂಗವನೆ ಕರುಣಿಸು**
**ಕೂಡಲಸಂಗಮದೇವಾ, ನಿಮ್ಮ ಧರ್ಮ.**

ಸಜ್ಜನರ ಅಥವಾ ಮಹಾನುಭಾವರ ಸಂಗದಿಂದ ಶಿವಯೋಗ ಸಾಧಕರನ್ನು ಕಾಣಬಹುದು. ಅಂಥ ಯೋಗಿಗಳ ಸಹವಾಸದಿಂದ ಗುರು, ಲಿಂಗ, ಜಂಗಮ, ದಾಸೋಹ, ಪ್ರಸಾದಗಳ ರಹಸ್ಯವನ್ನು ಕಂಡುಕೊಳ್ಳಬಹುದು. ಕೊನೆಯಲ್ಲಿ ತಾನು ಯಾರು? ತನ್ನ ಮಹತ್ವವೇನು? ಎಂಬಿತ್ಯಾದಿಗಳನ್ನು ಅರಿತುಕೊಳ್ಳಬಹುದು. ಆದ್ದರಿಂದ ಸದಾ ಸದ್ಭಕ್ತರ ಸಂಗವನ್ನು ಕರುಣಿಸಲೇಬೇಕೆಂದು ಕೂಡಲಸಂಗಮನಲ್ಲಿ ಅವರು ಬೇಡಿಕೊಳ್ಳುತ್ತಾರೆ. ಯಾರಿಗೂ ಕೇಡನ್ನು ಬಯಸದೆ ಅಥವಾ ಮತ್ತೊಬ್ಬರಲ್ಲಿ ಕೆಡುಕನ್ನು ಎಣಿಸದೆ, ತಮ್ಮತನವನ್ನು ಬಿಡದೆ ಬಾಳುವ ಸಜ್ಜನರಿಗೆ ದುರ್ಜನರಿಂದ ಆಗಾಗ ಕೆಲವು ಕೆಡುಕುಗಳು ಒದಗುವುದು ಸಹಜ. ಆಗ ಎಚ್ಚರಿಕೆಯಿಂದಿರಬೇಕೆಂದು ಬಸವಣ್ಣನವರು ಹೀಗೆ ಹೇಳುತ್ತಾರೆ:

**ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ**
**ದೂರ ದುರ್ಜನರ ಸಂಗವದು ಭಂಗವಯ್ಯಾ**
**ಸಂಗವೆರೆಡುಂಟು; ಒಂದ ಹಿಡಿ, ಒಂದ ಬಿಡು**
**ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ**

ಇನ್ನು ಲೋಕದಲ್ಲಿ ಅನುಕಂಪೆ, ಮನ್ನಣೆ ಯಾವಾಗಲೂ ಪಕ್ಷಪಾತದ್ದಾಗಿರುತ್ತದೆ. ಕೆಲವರು ಬಹಿರಂಗದ ವೈಭವದ ಪ್ರದರ್ಶನಕ್ಕೆ ಮಾರುಹೋಗಿ ಗೌರವ ನೀಡಲು ಮುಂದಾಗುತ್ತಾರೆ. ತಾವು ದೊಡ್ಡವರೆಂದು ಮೆರವಣಿಗೆ ಮಾಡಿಕೊಳ್ಳುವವರ ಅಂತರಂಗವನ್ನು ತಿಳಿದುಕೊಳ್ಳದೆ, ಅವರ ಕಾಲಿಗೆ ಅಡ್ಡಬಿದ್ದು ಭಕ್ತಿ ಸಮರ್ಪಣೆ ತೋರಿಸುವಂತಹ ಕ್ಷುಲ್ಲಕ ಜನರನ್ನು ಕಂಡ ಬಸವಣ್ಣನವರು ಹೀಗೆ ಹೇಳುತ್ತಾರೆ:

**ಕುದುರೆ ಸತ್ತಿಗೆಯವರ ಕಂಡಡೆ ಹೊರಳಿಬಿದ್ದು ಕಾಲಹಿಡಿವರು**
**ಬಡ ಭಕ್ತರು ಬಂದಡೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು,**
**ಎನ್ನೊಡೆಯ ಕೂಡಲಸಂಗಯ್ಯನವರ**
**ತಲೆಗೆಡಹಿ ಮೂಗ ಕೊಯ್ಯದೆ ಮಾಬನೆ?**

ಬಸವಣ್ಣನವರು ಹೇಗೆ ವಿನಯಸಂಪನ್ನರೋ ಹಾಗೆಯೇ ನ್ಯಾಯನಿಷ್ಠುರರೂ ಹೌದು. ತಮಗೆ ಸತ್ಯವೆಂದೋ ಅಥವಾ ಸರಿಯಲ್ಲವೆಂದೋ ತಿಳಿದುಬಂದಾಗ ಹೇಳಬಹುದಾದ್ದನ್ನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರೆಂಬುದಕ್ಕೆ ಈ ಮೇಲಿನ ವಚನ ಸಾಕ್ಷಿಯಾಗಿದೆ. ಸಜ್ಜನರೂ ಕೆಲವೊಮ್ಮೆ ಸಿರಿವಂತರ ಬಹಿರಂಗದ ಆಕರ್ಷಣೆಗೆ ಮೋಹಗೊಂಡು ಹಲ್ಕಿರಿದು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದುದನ್ನು ಬಸವಣ್ಣನವರು ಇಲ್ಲಿ ತೀವ್ರವಾಗಿ ವಿರೋಧಿಸುತ್ತಾರೆ.

ಅಂತರಂಗವನ್ನು ಪರಿಶೋಧಿಸದೆ, ಬಹಿರಂಗದ ಕ್ರಿಯಾಚರಣೆಗಳಿಗಷ್ಟೇ ಬೆಲೆ ನೀಡುವವರನ್ನು ಬಸವಣ್ಣನವರು ಖಂಡಿಸಿದರು. ಜ್ಞಾನಿಗಳಾದವರು ಎಂದಿಗೂ ಬಹಿರಂಗದ ಪ್ರದರ್ಶನ ಮಾಡಬಾರದು. ಅಂತರಂಗದ ಪರಿಪಾಕ ಹೊರವೇಷದಲ್ಲಿರುವುದಿಲ್ಲ. ಆದುದರಿಂದ **"ಬಡವರೆಂದೆನಬೇಡ, ಲಾಂಛನ ಧಾರಿಯ ಕಂಡು ಸ್ನೇಹದಿಂದ ಅವರ ಪೂಜೆಯ ಮಾಡುವುದು"** ಎಂದು ವಿವೇಕವನ್ನು ಅವರು ಬೋಧಿಸುತ್ತಾರೆ. ಬಸವಣ್ಣನವರ ಸುತ್ತಲಿದ್ದ ಅನೇಕ ಶರಣರು ಧನದಲ್ಲಿ ಬಲ್ಲಿದರೇನೂ ಆಗಿರಲಿಲ್ಲ. ಆದರೆ ಬಸವಣ್ಣನವರು ಮನದ ಘನತೆ ಎಂತಹುದು ಎಂಬುದನ್ನು ಸ್ವತಃ ಕಂಡುಕೊಂಡಿದ್ದರು.

ಸಮಾಜದಲ್ಲಿ ಬಲಹೀನರನ್ನು ಮತ್ತು ಬಡವರನ್ನು, ಬಲ್ಲಿದರು ಆಗಾಗ ಹೀಯಾಳಿಸುತ್ತಿದ್ದರು. ಇದನ್ನು ಬಸವಣ್ಣನವರು ಸಹಿಸಿಕೊಂಡಿರಲಿಲ್ಲ. ಮಹಾನ್ ಮಾನವತಾವಾದಿಯಾಗಿದ್ದ ಇವರ ದೃಷ್ಟಿಯಲ್ಲಿ ಎಲ್ಲರೂ ದೇವರ ಮಕ್ಕಳಾಗಿದ್ದರು. ಎಲ್ಲ ವರ್ಗದವರೂ ಸಹೃದಯವನ್ನು ಹೊಂದಿ, ಸೌಜನ್ಯದಿಂದ ನಡೆದುಕೊಳ್ಳಬೇಕೆಂದು ಉಪದೇಶಿಸಿದ ಬಸವಣ್ಣನವರು, ಸಜ್ಜನ ಮತ್ತು ಸೌಜನ್ಯಶೀಲ ವ್ಯಕ್ತಿಯೊಬ್ಬನು ಎಲ್ಲರನ್ನೂ ಗೌರವದಿಂದ ಹಾಗೂ ಮಾನವೀಯತೆಯಿಂದ ಕಾಣಬೇಕೆಂದು ಭಾವಿಸಿದವರು: **ನುಡಿದಡೆ ಮುತ್ತಿನ ಹಾರದಂತಿರಬೇಕು, ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು** ಎಂಬ ಅವರ ವಚನವು ಸಜ್ಜನಿಕೆಯ ಸಂಸ್ಕೃತಿಗೆ ಪೂರಕವಾಗಿದೆ. ಅವರು ಶ್ರೀಸಾಮಾನ್ಯರಿಗೆ ಕೇವಲ ಅಧ್ಯಾತ್ಮ ಸಾಧನೆಯನ್ನಷ್ಟೇ ಬೋಧಿಸದೆ, ದಿನನಿತ್ಯದ ಆಗು-ಹೋಗುಗಳ, ರೀತಿ-ನೀತಿಗಳ ಬಗೆಗೂ ತಿಳಿಹೇಳಿದರು.

ಉದಾತ್ತವಾದ ಸಾಧನೆಯ ಸಂದರ್ಭದಲ್ಲಿ ದುರ್ಜನರಿಂದ ಸಜ್ಜನರಿಗೆ ಕಹಿಪ್ರಸಂಗಗಳು ಒದಗಬಹುದು. ಆಗ ಅಂಥವರು ಕೋಪವನ್ನು ತಾಳದೆ ಸಮಾಧಾನಿಗಳಾಗಿರಬೇಕು. ಒಳ್ಳೆಯ ಮಾತು ಮತ್ತು ಒಳ್ಳೆಯ ಸಹವಾಸಗಳ ಮೂಲಕ ಅಜ್ಞಾನದ ಮೂಲವಾದ ಕೋಪವನ್ನು ಗೆಲ್ಲಬೇಕು. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಒಂದು ವಚನ ಹೀಗಿದೆ:

**ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ?**
**ತನಗಾದ ಆಗೇನು? ಅವರಿಗಾದ ಚೇಗೆಯೇನು?**
**ತನುವಿನ ಕೋಪ ತನ್ನ ಹಿರಿತನದ ಕೇಡು!**
**ಮನದ ಕೋಪ ತನ್ನ ಅರಿವಿನ ಕೇಡು!**
**ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ,**
**ನೆರೆಮನೆಯ ಸುಡುವುದೆ ಕೂಡಲಸಂಗಮದೇವಾ!**

ಸಜ್ಜನರಾದವರು ತಮ್ಮಷ್ಟಕ್ಕೆ ತಾವು ಸರಿದಾರಿಯಲ್ಲಿ ಸಾಗುತ್ತಿದ್ದರೆ, ಇತರರೂ ಸಾವಕಾಶವಾಗಿ ಅದನ್ನು ಅನುಸರಿಸಬಹುದು.

ದುರ್ಜನರು ಕೆಲವೊಮ್ಮೆ ಕೋಪಿಸಿಕೊಂಡಾಗ ಅದಕ್ಕೆ ಪ್ರತಿಯಾಗಿ ಸಜ್ಜನರೂ ಕೋಪಿಸಿಕೊಂಡರೆ ಇಬ್ಬರಲ್ಲೂ ವ್ಯತ್ಯಾಸ ಇರುವುದಿಲ್ಲ. ಪ್ರಾರಂಭದಿಂದಲೂ ಒಳ್ಳೆಯತನವನ್ನು ಕಾಪಾಡಿಕೊಂಡು ಬಂದ ಲಕ್ಷಣಗಳೆಲ್ಲ, ಆ ಕೋಪದ ಅಗ್ನಿಯಲ್ಲಿ ಸುಟ್ಟು ಭಸ್ಮವಾಗುತ್ತವೆ. ಒಮ್ಮೊಮ್ಮೆ ಇಂಥ ಪ್ರಸಂಗಗಳಲ್ಲಿ ಉದಾಸೀನವೇ ಮದ್ದು. ಕೋಪದ ವೈರತ್ವಕ್ಕೆ ಸಿಲುಕಿದರೆ ಮನೋವಿಕಾರವಾಗಿ ಅರಿವು ಅತಂತ್ರವಾಗಬಹುದು. ಉದಾಹರಣೆಗೆ, ಮನೆಯೊಳಗೆ ಹುಟ್ಟಿಕೊಂಡ ಬೆಂಕಿ ಮೊದಲು ಅದೇ ಮನೆಯನ್ನು ವ್ಯಾಪಿಸಿ, ನಂತರವಷ್ಟೇ ನೆರೆಮನೆಗೆ ಹಬ್ಬಿಕೊಳ್ಳುತ್ತದೆ. ದುರ್ಜನರನ್ನು ತುಳಿದು ಹಾಕುವ ನೆಪದಲ್ಲಿ ಸಜ್ಜನರು ತಮ್ಮ ಸ್ವಭಾವವನ್ನು ಕಳೆದುಕೊಂಡು ಅಧಃಪತನಕ್ಕೆ ಇಳಿಯಬಾರದು. ಸಜ್ಜನರು ಪ್ರತಿಕಾರ ಮನೋಭಾವನೆ ತೋರದಿದ್ದರೆ, ದುರ್ಜನರು ತಮ್ಮ ತಪ್ಪುಗಳನ್ನು ತಾವೇ ತಿಳಿದು, ಸರಿಯಾದ ಮಾರ್ಗದಲ್ಲಿ ವರ್ತಿಸುವರು. ಆಗ ಸಜ್ಜನರ ವ್ಯಕ್ತಿತ್ವಕ್ಕೆ ಹೆಚ್ಚಿನ ಬೆಲೆ ಉಂಟಾಗುತ್ತದೆ. ಇದು ಬಸವಣ್ಣನವರ ಅಭಿಪ್ರಾಯ.

ಅದೇ ರೀತಿ ದುರ್ಜನರ ರೀತಿ-ನೀತಿಗಳನ್ನು ಕೂಡ ಕಂಡಿರುವ ಬಸವಣ್ಣನವರು ಅವರ ಗುಣಸ್ವಭಾವಗಳನ್ನು ಕೆಲವು ವಚನಗಳಲ್ಲಿ ಸಾದೃಶ್ಯರೂಪವಾಗಿ ಹೇಳಿದ್ದಾರೆ. ದುರ್ಜನರು ಪರಹಿತವನ್ನು ಬಯಸದೇ ವಿಕೃತ ಭಾವನೆಗಳಲ್ಲಿದ್ದು, ಪರರ ನಂಬಿಕೆಗಳನ್ನು ಹಾಳುಮಾಡುತ್ತಾರೆ.

**ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟಡೆ**
**ಕೊಳೆವುದಲ್ಲದೆ ಬಲುಹಾಗಬಲ್ಲುದೆ?**
**ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ**
**ಭಕ್ತಿಯೆಂತಹುದು? ಮುನ್ನಿನಂತೆ!**
**ಕೂಡಲಸಂಗಯ್ಯ,**
**ಮನಹೀನನ ಮೀಸಲ ಕಾಯ್ದಿರಿಸಿದಂತೆ!**

'ನಾಯಿ ಬಾಲ ಎಂದೆಂದಿಗೂ ಡೊಂಕು' ಎಂಬ ಗಾದೆಯಂತೆ, ದುರ್ಜನರಿಗೆ ಎಂಥ ಹಿತವಾದ ಬೋಧನೆಗಳನ್ನು ಮಾಡಿದಾಗ್ಯೂ ಆ ಕ್ಷಣಕ್ಕೆ ಗಮನವಿಟ್ಟು ಕೇಳಿದಂತೆ ನಟಿಸಿ, ನಂತರ ಮತ್ತೆ ತಮ್ಮ ಮೂಲ ಸ್ವಭಾವಗಳಿಗೆ ಜೋತುಬೀಳುವುದುಂಟು. ಅಳಿಮನದವನಿಗೆ ಸಂಸ್ಕಾರ ನೀಡಿದರೆ ಆತನು ಭಕ್ತಿವಂತನಾಗಲಾರ. ಬಸವಣ್ಣನವರು ಇಂಥವರ ಬಗೆಗೆ ಈ ಸಾದೃಶ್ಯವನ್ನು ನೀಡುತ್ತಾರೆ: ಕುಂಬಳಕಾಯಿಗೆ ಕಬ್ಬಿಣದ ಕಟ್ಟನ್ನು ಕೊಟ್ಟರೆ ಅದು ಕೊಳೆವುದಲ್ಲದೆ ಅಲ್ಲಿಯೇ ಬೆಳೆದು ಬಲಿಷ್ಠವಾಗುವುದಿಲ್ಲ. ಶಿವದೀಕ್ಷೆಯ ಮೇಲೆ, ಲಿಂಗದ ಮೇಲೆ ನಂಬಿಗೆಯಿಲ್ಲದ ದುರ್ಜನರಿಗೆ ಅವುಗಳ ಉಪಯೋಗಗಳ ಬಗೆಗೆ ತಿಳಿಯಪಡಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಅದೇ ರೀತಿ, "ಮತಿಹೀನನ ಮೀಸಲು ಕಾಯ್ದಿರಿಸಿದಂತೆ" ಅಂದರೆ ದೇವರಿಗೆ ಅರ್ಪಿತವಾಗಲಿರುವ ಪ್ರಸಾದವನ್ನು ಕಾಯುವುದಕ್ಕಾಗಿ ಮತಿಹೀನನನ್ನು ನೇಮಿಸಿದರೆ ಆತ ಅದನ್ನೇ ತಿಂದುಬಿಡಬಹುದು. ಹೀಗೆ ಚಂಚಲ ಹಾಗೂ ವಿಕಲ್ಪ ಮನದ ದುರ್ಜನರಲ್ಲಿ ಪಾವಿತ್ರ್ಯತೆಯನ್ನು ಕಾಣುವುದು ಅತಿ ದುರ್ಲಭ. ಮೂಲಭೂತವಾದ ಸ್ವಾಭಾವಿಕ ಗುಣಗಳನ್ನು ಬದಲಾಯಿಸಿಕೊಳ್ಳದ ಜನರಿಗೆ ಮಾಡುವ ಶಿವಭಕ್ತಿಯ ಉಪದೇಶ ನಿರರ್ಥಕವಾಗುತ್ತದೆ. ಬಾಹ್ಯದಲ್ಲಿ ಬದಲಾದಂತೆ ಇದ್ದರೆ ಸಾಲದು; ಅಂತರಂಗದಲ್ಲಿಯೂ ಪರಿವರ್ತಿತರಾಗಬೇಕು. ಈ ಅಂಶವನ್ನು ಮುಂದಿನ ವಚನದಲ್ಲಿ ಬಸವಣ್ಣನವರು ಈ ರೀತಿ ವ್ಯಕ್ತಪಡಿಸಿದ್ದಾರೆ:

**ಕಬ್ಬುನದ ಕೋಡಗವ ಪರುಷ ಮುಟ್ಟಲು,**
**ಹೊನ್ನಾದಡೇನು ಮತ್ತೇನಾದಡೇನು**
**ತನ್ನ ಮುನ್ನಿನ ರೂಹ ಬಿಡದನ್ನಕ್ಕ**
**ಕೂಡಲಸಂಗಮದೇವಾ,**
**ನಿಮ್ಮ ನಂಬಿಯೂ ನಂಬದ ಡಂಬಕರಿಗಯ್ಯಾ!**

**"ನಂಬಿ ಕರೆದಡೆ, ಓ ಎನ್ನನೇ ಶಿವನು? ನಂಬದೆ ನಚ್ಚದೆ ಬರಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ"** – ಬಾಹ್ಯದಲ್ಲಿ ನಂಬಿಕೆಯಿದ್ದಂತೆ ನಟಿಸಿ, ಅಂತರಂಗದಲ್ಲಿ ಕಿಂಚಿತ್ತೂ ನಂಬಿಕೆ ಇಲ್ಲದ ದುರ್ಜನರನ್ನು (ಡಾಂಭಿಕರನ್ನು) ಬಸವಣ್ಣನವರು ಇಲ್ಲಿ ಖಂಡಿಸಿದ್ದಾರೆ. ಕಬ್ಬಿಣದ ಕೋಡಗವನ್ನು(ಕೋತಿ) ಪರುಷಮಣಿಯಿಂದ ಮುಟ್ಟಿದರೆ, ಅದು ಚಿನ್ನದ ಕೋಡಗವಾಗುತ್ತದೆಯೇ ಹೊರತು ಸುಂದರ ರೂಪವಾಗುವುದಿಲ್ಲ. ಕ್ರಿಯೆಯಲ್ಲಿ ನಂಬಿ, ಭಾವದಲ್ಲಿ ನಂಬಿಕೆಯಿಲ್ಲದವರಿಗೆ ಇಷ್ಟಲಿಂಗ ಕರುಣಿಸಿದರೂ ವ್ಯರ್ಥವೇ ಸರಿ. ಬಾಹ್ಯದಲ್ಲಿ ಭಕ್ತನಂತೆ ವೇಷ ಧರಿಸಿದರೆ, ಒಳಗಿನ ಸ್ವಭಾವಗಳು ಬದಲಾಗಲಾರವು. ಕೇವಲ ಬಣ್ಣ, ಆಕಾರ, ವೇಷ-ಭೂಷಣಗಳು ಮೇಲು ನೋಟದಲ್ಲಿ ಬದಲಾದರೆ ಸಾಕಾಗುವುದಿಲ್ಲ. ಅಂತರಂಗದಲ್ಲಿಯೂ ಶ್ರದ್ಧೆ, ಶಿಸ್ತು, ಚಿಂತನ-ಮಂಥನಗಳು ಬೇಕೇ ಬೇಕೆಂಬುದು ಬಸವಣ್ಣನವರ ಅಭಿಮತ.

ಇನ್ನು ಸಜ್ಜನರಾದವರು ಎಂಥವರ ಸ್ನೇಹ-ಸಂಬಂಧಗಳನ್ನು ಮಾಡಬೇಕು? ಡಂಭಾಚಾರದ ವ್ಯಕ್ತಿತ್ವವುಳ್ಳವರ ಸಂಗ-ಸಹವಾಸಗಳನ್ನು ಎಂದಿಗೂ ಮಾಡಬಾರದೆಂದು ಬಸವಣ್ಣನವರು ಈ ಕೆಳಗಿನ ವಚನದಲ್ಲಿ ಎಚ್ಚರಿಕೆ ನೀಡುತ್ತಾರೆ:

**ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ**
**ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ.**
**ಕೂಡಲಸಂಗನ ಶರಣರಲ್ಲಿ**
**ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ**

ಈ ವಚನದಲ್ಲಿ ಬಸವಣ್ಣನವರು ದುರ್ಜನರನ್ನು 'ಅರೆಭಕ್ತ' ಎಂದು ಸಂಬೋಧಿಸಿರುವುದನ್ನು ಗಮನಿಸಬೇಕು. ಅಂಥವರು ತಮ್ಮ ವೇಷದಲ್ಲಿ ಭಕ್ತರಂತೆ ಕಂಡರೂ ಅವರ ಆಚರಣೆಯಲ್ಲಿ ಡಾಂಭಿಕತೆ ಕಾಣಬರುತ್ತದೆ. ಇಂಥವರ 'ನೆರೆ' ಅಥವಾ 'ಸಂಗ' ಖಂಡಿತವಾಗಿಯೂ 'ಹೊರೆ'ಯಾಗದೇ ವಿಧಿಯಿಲ್ಲ. ಸಜ್ಜನರ ಸಾಧನೆಯ ಮಾರ್ಗದಲ್ಲಿ ದುರ್ಜನರ ನೆರವು ನಿಜಕ್ಕೂ ಶೂನ್ಯ. ಇವರಿಂದ ಅತಿ ದೂರವಿರಬೇಕಲ್ಲದೆ 'ಅಚ್ಚಲಿಂಗೈಕ್ಯಂಗೆ' ಅಂದರೆ, ನಿಜವಾದ ಶರಣರಿಗೆ ಮೊರೆಹೋಗಿ ರಕ್ಷಣೆ ಪಡೆದುಕೊಳ್ಳಬೇಕು.

ಒಟ್ಟಾರೆ ಸುಂದರ ಸಮಾಜದ ರಚನೆಗೆ ಬಸವಣ್ಣನವರ ಚಿಂತನೆಗಳು ಅಂದಿಗೂ ಇಂದಿಗೂ ಮುಂದೆಯೂ ಅರ್ಥಪೂರ್ಣವಾಗಿವೆ ಮತ್ತು ಪ್ರಸ್ತುತವೂ ಆಗಿವೆ ಎನ್ನುವುದು ನಿಸ್ಸಂದೇಹ. ಹಾಗೆಂದೇ ಅವರ ವಚನಗಳು ಇಂದು ಅತ್ಯಗತ್ಯವಾಗಿರುವ 'ನೈತಿಕ ಶಿಕ್ಷಣ'ಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ನಮಗೆ ನೀಡುತ್ತವೆ.

★